

ಸಂಪಾದಕೀಯ

# ಭಾರತೀಯ ಸಂಸ್ಕೃತಿಯ ಭವ್ಯತೆ

**ನ**ಮ್ಮ ದೇಶದ ಸಂಸ್ಕೃತಿಯನ್ನು ಕುರಿತು ಹೇಳಹೊರಟಾಗ, 'ಭಾರತೀಯ ಸಂಸ್ಕೃತಿ? ಅಂಥದೊಂದು ಇದೆಯೆ?', 'ಎಷ್ಟೊಂದು ವೈವಿಧ್ಯತೆ, ಎಷ್ಟು ಬಗೆಯ ಜನರು; ಭಾಷೆ, ವೇಷಭೂಷಣ, ಜೀವನಕ್ರಮ, ನಡವಳಿಕೆ — ಎಲ್ಲದರಲ್ಲೂ , ಒಂದೊಂದು ಪ್ರಾಂತದಲ್ಲೂ ಒಂದೊಂದು ರೀತಿ.' 'ಈ ದೇಶದಲ್ಲಿ ಸಂಸ್ಕೃತಿಯೆಂಬುದು ಕಲಸುಮೇಲೋಗರ. ಇಲ್ಲಿ 'ಒಂದು' ಸಂಸ್ಕೃತಿ ಎಂಬುದಿಲ್ಲ; ಹಲವು ಸಂಸ್ಕೃತಿಗಳಿವೆ' ಎಂದೆಲ್ಲ ಪ್ರತಿಕ್ರಿಯೆಗಳು ಬರುತ್ತವೆ. ಒಟ್ಟಿನಲ್ಲಿ ಮೂರು ಬಗೆಯ ಅಭಿಪ್ರಾಯಗಳನ್ನು ಕೇಳುತ್ತೇವೆ. ೧) ಭಾರತೀಯ ಸಂಸ್ಕೃತಿ ಎಂಬುದು ಇದೆ. ಹಿಂದೆ ಕೂಡ ಇತ್ತು, ಇಂದಿಗೂ ಇದೆ. ಜನಜೀವನದೊಂದಿಗೆ ಅದು ಹರಿಯುತ್ತಿದೆ. ೨) ಭಾರತೀಯ ಸಂಸ್ಕೃತಿ ಎಂಬುದು ಬರೀ ಕಲ್ಪನೆ, ಇಲ್ಲಿ ಹತ್ತುಹಲವು ವೈವಿಧ್ಯಮಯವಾದ ಸಂಸ್ಕೃತಿಗಳಿವೆ; ಇವನ್ನೆಲ್ಲ ಒಂದು ಸಂಸ್ಕೃತಿಯೆಂಬಂತೆ ಕಾಣುವುದು ಕೇವಲ ವ್ಯರ್ಥ ಪ್ರಯತ್ನ. ೩) ಪ್ರತಿಯೊಂದು ಜನಜೀವನದಲ್ಲೂ ಒಂದಲ್ಲ ಒಂದು ಸಂಸ್ಕೃತಿಯಿದ್ದೇ ಇರುತ್ತದೆ; ನಮ್ಮಲ್ಲಿ ವೈವಿಧ್ಯಮಯ ಸಂಸ್ಕೃತಿ ಇದೆ. ಆದರೆ ಎಲ್ಲ ವೈವಿಧ್ಯತೆಗಳ ಹಿಂದೆ ಒಂದು ಅಪೂರ್ವ ಏಕತೆಯಿದೆ — ಅದೇ ನಮ್ಮ ವಿಶೇಷತೆ.

## ಸಾಂಸ್ಕೃತಿಕ ಪ್ರಜ್ಞೆ

ಸಂಸ್ಕೃತಿಯನ್ನು ಕುರಿತು ಪ್ರಶ್ನಿಸುವವರು ಮಾಡುವ ಸಾಮಾನ್ಯ ಟೀಕೆಯೇನೆಂದರೆ ಭಾರತದಲ್ಲಿ ಎಂದಿಗೂ ಸಾಂಸ್ಕೃತಿಕ ಪ್ರಜ್ಞೆ ಇರಲೇ ಇಲ್ಲ ಎಂದು. 'ಭಾರತ'ವೆಂಬ ಸಮಗ್ರಕಲ್ಪನೆಯೇ ಇಲ್ಲದಿದ್ದ ಮೇಲೆ 'ಭಾರತೀಯ ಸಂಸ್ಕೃತಿ' ಎಂಬ ಕಲ್ಪನೆಯಾದರೂ ಜನರಿಗೆ ಹೇಗೆ ಬರಬೇಕು? ಆದ್ದರಿಂದ ನಮ್ಮ ಜನರಿಗೆ 'ಭಾರತ' ವೆಂಬ ಪ್ರಜ್ಞೆ ಬಂದ ಮೇಲೆಯೇ — ಅಂದರೆ ಬ್ರಿಟಿಷರ ಸಂಪರ್ಕವಾದ ಮೇಲೆಯೇ — ಸಾಂಸ್ಕೃತಿಕ ಪ್ರಜ್ಞೆ ಮೂಡಿತು ಎಂಬುದು ಇವರ ಅಭಿಪ್ರಾಯ.

ನಮ್ಮ ಜನರಿಗೆ 'ಭಾರತ'ವೆಂಬ ಕಲ್ಪನೆಯೇ ಇರಲಿಲ್ಲ, ಅದು ಕೇವಲ ಬ್ರಿಟಿಷರು ನೀಡಿದ ಕೊಡುಗೆ ಎಂಬುದು ಹುರುಳಿಲ್ಲದ ಮಾತು. ರಾಜಕೀಯವಾಗಿ ಹತ್ತಾರು ಪ್ರಾಂತಗಳಾಗಿದ್ದ ಸಂದರ್ಭದಲ್ಲೂ, ಹಲವು ಬಗೆಯ ಅರಾಜಕತೆಯಿಂದಾಗಿ ಈ ದೇಶ ಹರಿಹಂಚಾಗಿ ಹೋಗಿದ್ದಾಗಲೂ ಸಾಂಸ್ಕೃತಿಕ ಏಕತೆಯೆಂಬುದು ಭಾರತದ ಉದ್ದಗಲಕ್ಕೂ ಜೀವಂತವಾಗಿತ್ತು. ನಿಜವಾದ ಅರ್ಥದಲ್ಲಿ, ಈ ದೇಶವನ್ನು ಒಂದುಗೂಡಿಸಿದ ಶಕ್ತಿಯೇ ಇಲ್ಲಿನ ಸಂಸ್ಕೃತಿ. ಕಾಶ್ಮೀರದಿಂದ ಕನ್ಯಾಕುಮಾರಿಯ ತನಕವೂ, ದ್ವಾರಕೆಯಿಂದ ಕಾಮಾಖ್ಯದವರೆಗೂ ಜನರ ಮೂಲಭೂತ ನಂಬಿಕೆ, ನಡವಳಿಕೆ, ಆಚಾರವಿಚಾರಗಳಲ್ಲಿ ಒಂದು ಸಾಮ್ಯತೆ ಅತಿ ಪ್ರಾಚೀನ ಕಾಲದಲ್ಲೂ ಇತ್ತು ; ಇಂದಿಗೂ ಇದೆ. ಧರ್ಮ, ಸಂಪ್ರದಾಯ, ಆಚರಣೆ, ಜೀವನಕ್ರಮ, ಇವೆಲ್ಲವೂ ಒಂದು ಸಂಸ್ಕೃತಿಯನ್ನು ರೂಪಿಸುತ್ತವೆ. ಇವೇ ಈ ನೆಲದ ಸಂಸ್ಕೃತಿಯ ತಿರುಳು. ವೈವಿಧ್ಯತೆಯೆಲ್ಲವೂ ಬಾಹ್ಯದಲ್ಲಿ; ಪ್ರಕಟವಾಗಿ ಕಾಣಿಸುವ ಜೀವನ ಪದ್ಧತಿಯಲ್ಲಿ. ಪ್ರಾಚೀನ ಸಾಹಿತ್ಯದಲ್ಲಿ ಹಲವೆಡೆ 'ಭಾರತವರ್ಷ'ದ ಭೌಗೋಳಿಕ ವಿವರಣೆ, ಇಲ್ಲಿನ ಪುಣ್ಯಕ್ಷೇತ್ರಗಳ ಹಾಗೂ ಪುಣ್ಯನದಿಗಳ ವಿವರಣೆ ಕಂಡುಬರುತ್ತವೆ. ಇವೆಲ್ಲ ಇಲ್ಲಿನ ಸಾಂಸ್ಕೃತಿಕ ಎಲ್ಲೆಯನ್ನು ನಿರ್ಧರಿಸುತ್ತವೆ.

ಇನ್ನೊಂದು ಮುಖ್ಯವಾದ ಅಂಶವೆಂದರೆ, ಸಾಂಸ್ಕೃತಿಕ ಪ್ರಜ್ಞೆ ನಮ್ಮಲ್ಲಿ ಇರಲಿಲ್ಲ ಎಂದು ಮಾತ್ರಕ್ಕೆ ನಮ್ಮಲ್ಲಿ ಸಂಸ್ಕೃತಿಯೇ ಇರಲಿಲ್ಲವೆಂದು ಹೇಳಲಾಗುವುದಿಲ್ಲ. ಹಳ್ಳಿಯ ಜನರು ವ್ಯಾಕರಣವನ್ನು ಕಲಿಯದಿದ್ದರೂ, ಎಷ್ಟೊಂದು ವ್ಯಾಕರಣಬದ್ಧವಾಗಿ ತಮ್ಮ ಆಡುಮಾತನ್ನು ಆಡುತ್ತಾರೆ! ಅವರಿಗೆ ತಾವು ಆಡುವ ಮಾತಿನಲ್ಲಿ ವ್ಯಾಕರಣ ಎಂಬುದು ಅಡಗಿದೆ ಎಂಬ ಪ್ರಜ್ಞೆಯೇ ಇರುವುದಿಲ್ಲ. ಆದರೆ ಆಡುವ ಮಾತಿನಲ್ಲಿ ವ್ಯಾಕರಣ ಸ್ವಲ್ಪ ತಪ್ಪಿದರೂ ಅವರು ತಿದ್ದಿಕೊಡುವುದಿಲ್ಲವೆ? ಅದೇರೀತಿ, ನಮ್ಮ ಸಂಸ್ಕೃತಿ ನಮ್ಮ ಜನಜೀವನದಲ್ಲಿ ಗಾಢವಾಗಿ ಅವಿತು ಅವರಿಸಿಕೊಂಡಿದೆ. ಅತ್ಯಂತ ಪ್ರಾಚೀನಕಾಲದಿಂದಲೇ ಅದು ಭಾರತದ ಜನಜೀವನವನ್ನು ಮುನ್ನಡೆಸುವ ಶಕ್ತಿಯಾಗಿದ್ದಿತು. ಸಾಂಸ್ಕೃತಿಕ ಪ್ರಜ್ಞೆ ಇದ್ದರೂ ಸರಿ, ಇಲ್ಲದಿದ್ದರೂ ಸರಿ, ನಮ್ಮ ಸಂಸ್ಕೃತಿಯು ನಮ್ಮ ಜೀವನದ ನರನಾಡಿಯಾಗಿ ಅನವರತವೂ ಹರಿದುಕೊಂಡು ಬಂದಿದೆ.

## ಗುಪ್ತಗಾಮಿನಿಯ ಮಹಾಭೋರ್ಗರೆತ

ಆಧುನಿಕ ವಿದ್ಯಾಭ್ಯಾಸ, ಪಾಶ್ಚಾತ್ಯರ ಸಂಪರ್ಕ, ನವ ಭಾರತದ ಉದಯ ಹಾಗೂ ಭಾರತದಲ್ಲಿ ಜಾಗೃತವಾದ ರಾಷ್ಟ್ರೀಯ ಪ್ರಜ್ಞೆ — ಇವೆಲ್ಲವೂ ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಒಗ್ಗೂಡಿ, ಒಂದು ಹೊಸ ಜಾಗೃತಿ ಎಲ್ಲೆಡೆ ಉಂಟಾಗುವಂತೆ

ಮಾಡಿತು. ಆ ಯುಗದಲ್ಲಿ ಭಾರತದ ಎಲ್ಲೆಡೆ ಸ್ವಾತಂತ್ರ್ಯ ಚಳುವಳಿಯ ಕಿಚ್ಚು ವ್ಯಾಪಿಸತೊಡಗಿತ್ತು. ಅದೇ ಸಂದರ್ಭದಲ್ಲಿ ದೇಶದ ಧಾರ್ಮಿಕ, ಆಧ್ಯಾತ್ಮಿಕ ಜಾಗೃತಿಗೆ ಕಾರಣರಾದ ಅನೇಕ ಮಂದಿ ಆಧ್ಯಾತ್ಮಿಕ ಮಹಾಪುರುಷರು ಜನರಲ್ಲಿ ಸಾಂಸ್ಕೃತಿಕ ಹಾಗೂ ಧಾರ್ಮಿಕ ಪ್ರಜ್ಞೆ ಮೂಡಿಸುವ ಕಾರ್ಯಕ್ಕೆ ಮುಂದಾದರು. ರಾಷ್ಟ್ರೀಯತೆ ಹಾಗೂ ಸಾಂಸ್ಕೃತಿಕ ಅರಿವು ಎರಡೂ ಒಗ್ಗೂಡಿದ್ದು ಆ ಕಾಲದ ದೇಶಪ್ರೇಮಿಗಳ ಉತ್ಸಾಹಕ್ಕೆ ಹೊಸ ದಿಕ್ಕನ್ನು ತೋರಿಸಿಕೊಟ್ಟಿತು. ಇದರ ಪರಿಣಾಮವಾಗಿ ದೇಶದ ಉದ್ದಗಲಕ್ಕೂ ಭಾರತೀಯ ಸಾಂಸ್ಕೃತಿಯ ಅರಿವು ಹೊಚ್ಚ ಹೊಸ ಮೆರುಗಿನೊಂದಿಗೆ ಕಾಣಿಸಿಕೊಂಡಿತು. ಎಲ್ಲಿಂದಲೋ ಬಂದುದಲ್ಲ, ನಮ್ಮಲ್ಲೇ ಇದ್ದ, ಈಗಲೂ ಇರುವ ಒಂದು ಶಕ್ತಿಯಿದು, ಸಂಸ್ಕೃತಿಯೆಂಬ ಅಪೂರ್ವ ಕಾಂತಿಯ ರತ್ನವಿದು — ಎಂಬುದು ಅನೇಕರ ಅರಿವಿಗೆ ಬಂತು. ಇದು ವ್ಯಕ್ತವಾಗಿದ್ದು ಆಗಿನ ಕಲೆ, ಸಾಹಿತ್ಯಗಳಲ್ಲಿ ; ದೇಶಪ್ರೇಮವನ್ನು ಮೂಡಿಸುವ ಸ್ಫೂರ್ತಿಯುತ ಭಾಷಣಗಳಲ್ಲಿ. ಇವೆಲ್ಲ ಸ್ವಾತಂತ್ರ್ಯ ಚಳವಳಿಗೆ ಪೂರಕವಾದದ್ದು ಗಮನಾರ್ಹವಾದ ಸಂಗತಿ.

ಹೇಗೆ ಹಿಮಾಲಯದ ಮೂಲೆಯಲ್ಲಿ ಗುಪ್ತಗಾಮಿನಿಯಾಗಿ ಹುಟ್ಟಿದ ಸಣ್ಣ ತೊರೆಯೊಂದು ಇದ್ದಕ್ಕಿದ್ದಂತೆ ಗೋಮುಖದ ಮೂಲಕ ನದಿಯಾಗಿ ವ್ಯಕ್ತಗೊಳ್ಳುವುದೋ, ತನ್ನೆಲ್ಲ ಪಾವಿತ್ರ್ಯ, ವೈಭವ ಸೌಂದರ್ಯಗಳನ್ನು ಸಮೀಕರಿಸಿ ಅಮರ ಗಂಗೆಯಾಗಿ ಹರಿಯುವುದೋ, ಅಂತೆಯೇ, ಅಲ್ಲಿಯತನಕ ಭಾರತೀಯರ ಜನಜೀವನದಲ್ಲಿ ಪರಂಪರೆ, ನಂಬಿಕೆ, ಶ್ರದ್ಧೆ, ಆಚರಣೆಗಳ ರೂಪದಲ್ಲಿ ಅವ್ಯಕ್ತವಾಗಿದ್ದ ಒಂದು ಮಹಾನ್ ಸಂಸ್ಕೃತಿ ಈಗ ಹೊಸ ಅರಿವಿನೊಂದಿಗೆ ವ್ಯಕ್ತವಾಗತೊಡಗಿತು. ಸ್ವಾತಂತ್ರ್ಯದ ಅರುಣೋದಯ ಕಾಲದಲ್ಲಿ ಅದು ತನ್ನ ಹೊಂಗಿರಣಗಳನ್ನು ಬೀರಿದ್ದು ಆಗಿನ ವಿದ್ಯಾವಂತ, ಉತ್ಸಾಹೀ ಭಾರತೀಯರ ಮನಸ್ಸುಗಳಲ್ಲಿ. ಅದರ ಮರುಧ್ವನಿಯೆಂಬಂತೆ ಅನುರಣಿಸುವ ಸ್ವಾಮಿ ವಿವೇಕಾನಂದರ ಈ ಮಾತುಗಳನ್ನು ಇಲ್ಲಿ ನೆನೆಯಬೇಕು:

''ಸುದೀರ್ಘ ರಾತ್ರಿಯು ಕಡೆಗೆ ಇಂದು ಕೊನೆಗಾಣುವಂತೆ ತೋರುತ್ತಿದೆ. ಬಹು ಕಾಲದ ಕಷ್ಟಸಂಕಟಗಳು ಕೊನೆಗೆ ಇಂದು ಸಮಾಪ್ತಿಗೊಳ್ಳುವಂತಿದೆ. ಇದುವರೆಗೆ ಶವದಂತೆ ಇದ್ದ ಶರೀರವು ಇಂದು ಸಚೇತನವಾಗುತ್ತಿದೆ. ವಾಣಿಯೊಂದು ನಮಗೆ ಕೇಳಿ ಬರುತ್ತಿದೆ. ಇತಿಹಾಸ, ಸಂಪ್ರದಾಯಗಳು ಇಣುಕಿ ಕೂಡ ನೋಡಲು ಸಾಧ್ಯವಿಲ್ಲದಷ್ಟು ಬಹುಪುರಾತನವಾದ ಕಾಲಗರ್ಭದಲ್ಲಿ ಉಗಮಿಸಿ, ಜ್ಞಾನ, ಕರ್ಮ, ಭಕ್ತಿಗಳ ಅನಂತ ಹಿಮಾಚಲ ಗಿರಿಶಿಖರಗಳಲ್ಲಿ ಪ್ರತಿಧ್ವನಿಗೊಂಡು ಆ ವಾಣಿಯು ಹೊಮ್ಮಿ ಬರುತ್ತಿದೆ. ಮೃದುವಾದರೂ ಸದೃಢವಾದ, ತನ್ನ ಸಂದೇಶವನ್ನು ಅಸಂದಿಗ್ಧವಾಗಿ ಸಾರುವ ಆ ವಾಣಿಯು, ದಿನಗಳು ಉರುಳಿದಂತೆ ಹೆಚ್ಚು ಹೆಚ್ಚು ತೀವ್ರವಾಗುತ್ತಾ ಬರುತ್ತಿದೆ. ಅದೋ ನೋಡಿ! ನಿದ್ರಿಸುತ್ತಿರುವುದು ಜಾಗೃತವಾಗುತ್ತಿದೆ. ಹಿಮಾಲಯದ ತಂಗಾಳಿಯಂತೆ ಅದು ಮೃತಪ್ರಾಯವಾದ ಮೂಳೆ ಮಾಂಸಗಳಿಗೆ ಪ್ರಾಣದಾನ ಮಾಡುತ್ತಿದೆ. ಜಡತೆಯು ಬೀಳ್ಕೊಳ್ಳುತ್ತಿದೆ. ನಮ್ಮೀ ಮಾತೃಭೂಮಿಯು ತನ್ನ ದೀರ್ಘ ನಿದ್ರೆಯನ್ನು ತ್ಯಜಿಸಿ ಜಾಗೃತವಾಗುತ್ತಿರುವುದನ್ನು ಕುರುಡರು ಮಾತ್ರ ಕಾಣಲಾರರು, ಮೂರ್ಖರು ಮಾತ್ರ ಕಾಣಲೊಲ್ಲರು. ಅವಳನ್ನು ಇನ್ನು ಯಾರೂ ತಡೆಯಲಾರರು. ಆಕೆ ಇನ್ನು ಎಂದೆಂದೂ ನಿದ್ದೆ ಹೋಗುವುದಿಲ್ಲ. ಯಾವ ಬಾಹ್ಯಶಕ್ತಿಯೂ ಇನ್ನು ಅವಳನ್ನು ಹಿಮ್ಮೆಟ್ಟಿಸಲಾರದು. ಏಕೆಂದರೆ ಆ ಮಹಾಕಾಳಿಯು ಪ್ರತಿಷ್ಠಾಪನೆಗೊಳ್ಳುತ್ತಿದ್ದಾಳೆ.''

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ಸಂಪುಟ ೩, ಪು.೩೬)*

## ಒಳಸುಳಿಗಳ ಅಪಾಯ

ಸಮುದ್ರವನ್ನು ಕಡೆದಲ್ಲದೆ ಅಮೃತ ಹುಟ್ಟುವುದಿಲ್ಲ; ದೇವತೆಗಳಂತೆ ಅಸುರರೂ ಅಲ್ಲಿ ಅದನ್ನು ಕಡೆಯಬೇಕಾಯಿತು. ವಿಚಾರ ಮಥನದಲ್ಲೂ ಇದೇ ರೀತಿ. ಹೆಜ್ಜೆಹೆಜ್ಜೆಗೂ ಪ್ರಶ್ನಿಸುವ, ತಡೆಯೊಡ್ಡುವ, ಟೀಕಿಸುವ ಹಾಗೂ ಸಾರಾಸಗಟಾಗಿ ತಿರಸ್ಕರಿಸುವ ಮಂದಿ ಎಲ್ಲ ಕಾಲಕ್ಕೂ ಇದ್ದೇ ಇರುತ್ತಾರೆ. ಅನೇಕ ಹಿತಾಸಕ್ತಿಗಳಿಂದ ಸೆಳೆಯಲ್ಪಟ್ಟ ವಿಚಾರವಾದಿಗಳಿಗೆ ದೇಶಪ್ರೇಮ ಇಷ್ಟವಾಗಲಿಲ್ಲ; ಬದಲಾಗಿ, ತಮ್ಮ ಹಿತಸಾಧನೆಗೆ ಧಕ್ಕೆಯೆನಿಸಿತು. ಅದಕ್ಕಾಗಿ ತಮ್ಮ ಬುದ್ಧಿವಂತಿಕೆ, ವಿಚಾರಧಾರೆಗಳನ್ನು ಬಳಸಿಕೊಂಡು, ಹೊಸ ರೀತಿಯ ಸಂಶಯಭರಿತ ವಾದಗಳನ್ನೇ ಹುಟ್ಟುಹಾಕತೊಡಗಿದರು. 'ಭಾರತದೇಶ ಒಂದು' ಎಂಬ ಭಾವನೆಯನ್ನೇ ಒಪ್ಪದ ಅನೇಕ ಮಂದಿ ಕೂಡ ಆ ಕಾಲದಲ್ಲಿ ಇದ್ದರು. ಇಂದಿಗೂ ಈ ಬಗೆಯ ಚಿಂತನೆ ನಡೆಸುವ ಜನರು ಉಳಿದಿರುವುದು ದುರ್ದೈವದ ಸಂಗತಿ. ಇನ್ನು ಸಂಸ್ಕೃತಿಯೆಂದರೆ ಅದನ್ನು ಧರ್ಮಕ್ಕೂ, ಜನಾಂಗಕ್ಕೂ ತಳುಕು ಹಾಕುತ್ತ, ನಾವು ವಿಶ್ವವ್ಯಾಪಕ ದೃಷ್ಟಿಯನ್ನು ಹಾಗೂ ಸಾರ್ವತ್ರಿಕ ಮನೋಭಾವವನ್ನು ಹೊಂದಿರಬೇಕು ಎಂಬ ವಾದವನ್ನು ಮುಂದೊಡ್ಡಿ, 'ಭಾರತೀಯ'ವೆಂಬ ಸೀಮಿತ ದೃಷ್ಟಿಯೇ ಸಂಕುಚಿತ ಭಾವನೆ ಎನ್ನುತ್ತಾರೆ. ಆದರೆ ಈ ಎಲ್ಲ ಸಂಕುಚಿತ ಭಾವನೆಗಳ ಎಲ್ಲೆಯನ್ನು ಮೀರಿ, ಅನಂತದಲ್ಲಿ ಪರ್ಯವಸಾನವಾಗುವ ಅತ್ಯುನ್ನತ ಭಾವನೆ ಉದಿಸಿದ್ದೇ ಈ ದೇಶದ ಸಂಸ್ಕೃತಿಯಲ್ಲಿ. ಆದ್ದರಿಂದ 'ಭಾರತೀಯ ಸಂಸ್ಕೃತಿ' ಎಂಬ ಭಾವನೆ ಸಂಕುಚಿತ ದೃಷ್ಟಿಯದಲ್ಲ; ಬದಲಾಗಿ ಅಂಥ ಎಲ್ಲ ದೃಷ್ಟಿಗಳನ್ನು ಮೀರಿ ಹೋಗುವಂತಹದು. ತೋರಿಕೆಗೆ ವೈರುಧ್ಯವೆಂಬಂತೆ ಕಾಣುವ 'ಅನೇಕತೆಯಲ್ಲಿ ಏಕತೆ' ಹಾಗೂ 'ರಾಷ್ಟ್ರೀಯತೆಯಲ್ಲಿ ದೃಢವಾಗಿ ನಿಂತು ವಿಶ್ವವಿಶಾಲವಾಗಿ ಬೆಳೆಯುವುದು' — ಈ ವಿಚಾರಗಳು ಭಾರತೀಯ ಸಂಸ್ಕೃತಿಯಲ್ಲಿ ಮಾತ್ರ ಕಂಡುಬರುವ ಒಂದು ವಿಶೇಷತೆಯಾಗಿದೆ.

ಅನೇಕ ಅಡೆತಡೆಗಳಿಂದಲೂ, ಆಕ್ರಮಣಗಳಿಂದಲೂ, ವಿಭಿನ್ನ ಪ್ರಭಾವಗಳಿಂದಲೂ, ಜರ್ಜರಿತವಾದ ಈ ಸಂಸ್ಕೃತಿ ಸುದೀರ್ಘ

ಇತಿಹಾಸದ ಪ್ರಯಾಣದಲ್ಲಿ ಹಲವು ಏರುಪೇರುಗಳನ್ನು ಕಂಡಿದೆ; ಆದರೆ ಎಲ್ಲ ಗಂಡಾಂತರಗಳನ್ನು ಎದುರಿಸಿ, ಗೆದ್ದು ಬಂದಿದೆ. ಆದರೆ ಇಂಥ ಅನೇಕ ಏರುಪೇರುಗಳಿಂದ ಅದು ಅನ್ಯ ಜನಾಂಗಗಳ ಮೇಲೆ ಬೀರಿದ ಪ್ರಭಾವವೇ ಅತ್ಯಂತ ಗಾಢವೂ ವ್ಯಾಪಕವೂ ಆಗಿದೆ ಎಂಬುದು ಗಮನಾರ್ಹ ಸಂಗತಿ. ಹೀಗೆ ಅಚ್ಚಳಿಯದೆ ಉಳಿದು ಮುಂದುವರಿಯಲು, ಈ ಸಂಸ್ಕೃತಿಯ ತಳಹದಿಯು ಅತ್ಯಂತ ಸುಭದ್ರವಾದ ತತ್ತ್ವಗಳ ಮೇಲೆ ನಿಂತಿರುವುದೇ ಕಾರಣ. ಆಧ್ಯಾತ್ಮಿಕತೆಯೇ ನಮ್ಮ ಸಂಸ್ಕೃತಿಯ ತಳಹದಿಯಾಗಿದೆ.

## ಸಕಲವೂ ಆಪೋಶನ

ನಮ್ಮ ಸಂಸ್ಕೃತಿಯಲ್ಲಿ ಇನ್ನೊಂದು ವಿಶೇಷತೆಯಿದೆ. ಅದರ ಸಂಪರ್ಕಕ್ಕೆ ಬಂದ ಯಾವ ಉತ್ತಮ ವಿಚಾರವನ್ನೂ ಅದು ತಿರಸ್ಕರಿಸುವುದಿಲ್ಲ; ಅದನ್ನು ತನ್ನೊಳಕ್ಕೆ ಸೆಳೆದು ಅರಗಿಸಿಕೊಳ್ಳುತ್ತದೆ. ಅತ್ಯಂತ ಪ್ರಾಚೀನ ಕಾಲದಿಂದಲೇ ಈ ಕಾರ್ಯ ನಡೆದುಬಂತು. ಇದರ ಫಲವಾಗಿ ಸಂಸ್ಕೃತಿ ಇನ್ನಷ್ಟು ವಿಶಾಲಗೊಳ್ಳುತ್ತ, ಇನ್ನಷ್ಟು ಮಥನಕ್ಕೆ ಒಳಗಾಗುತ್ತ ಬೆಳೆಯುತ್ತ ಬಂತು. ಬಾಹ್ಯ ಪ್ರಭಾವಗಳು ಎಷ್ಟೇ ಬರಲಿ, ಅವನ್ನೆಲ್ಲ ತನ್ನಲ್ಲಿ ಕರಗಿಸಿಕೊಳ್ಳುವುದು ಭಾರತೀಯ ಸಂಸ್ಕೃತಿಯ ಶಕ್ತಿಯಾಗಿ ಕಂಡುಬಂದಿದೆ. ವೈದಿಕ ಯುಗದ ನಂತರ ಬೌದ್ಧ, ಜೈನ ವಿಚಾರಗಳು ಈ ಸಂಸ್ಕೃತಿಗೆ ಹೊಸ ಬಾಗಿಲನ್ನು ತೆರೆದವು; ಅದರೊಂದಿಗೆ ಬೇರೆ ದೇಶಗಳ ಸಂಪರ್ಕ, ಕೊಡು-ಕೊಳ್ಳುವಿಕೆ ನಡೆದವು. ಪ್ರಾಚೀನ ಗ್ರೀಕ್, ರೋಮನ್ ಹಾಗೂ ಅರೇಬಿಯನ್ ಜನಾಂಗಗಳೊಂದಿಗೆ ವಾಣಿಜ್ಯ ವ್ಯವಹಾರಗಳೊಂದಿಗೆ ವೈಚಾರಿಕ ವಿನಿಮಯದಲ್ಲಿ ನಡೆಯುತ್ತಿದ್ದವು. ಇದರಿಂದಾಗಿ ಎಂದೂ ಇಲ್ಲಿನ ಸಾಂಸ್ಕೃತಿಕ ಭಾವನೆಗಳು ಬದಲಾಗಲಿಲ್ಲ; ಬದಲಾಗಿ ಇನ್ನಷ್ಟು ಬಲಗೊಂಡವು. ಅನಂತರ ಬಂದ ಹೂಣರು, ಕುಶಾನರು ಈ ಸಂಸ್ಕೃತಿಯಲ್ಲೇ ವಿಲೀನಗೊಂಡರು. ಮಧ್ಯಯುಗದಲ್ಲಿ ಬಂದ ಮೊಗಲರು, ನಂತರ ಪಾಶ್ಚಾತ್ಯರು ಭಾರತಕ್ಕೆ ಆಧುನಿಕತೆಯ ಹಾಗೂ ಇತರ ದೇಶಗಳ ಪರಿಚಯವನ್ನು ಇನ್ನಷ್ಟು ಮಾಡಿಕೊಟ್ಟರು. ಈ ಸಂಪರ್ಕಗಳಿಂದ ಭಾರತೀಯ ಸಾಂಸ್ಕೃತಿಕ ವಿಚಾರಗಳಿಗೆ ಹೊಸ ಮೆರುಗು ಮೂಡಿಬಂತು. ರಾಜಕೀಯ ವಿಪ್ಲವ, ಸಾಮಾಜಿಕ ನವೀಕರಣ, ಮತಾಂತರವೇ ಮೊದಲಾದ ವಿದ್ಯಮಾನಗಳು ನಡೆದರೂ, ಭಾರತದ ಸಾಂಸ್ಕೃತಿಕ ಜೀವನ ಅಂಥ ಸಂಘರ್ಷವನ್ನು ಸಮರ್ಥವಾಗಿ ಎದುರಿಸುತ್ತ ಬಂತು. ಇತ್ತೀಚಿನ ದಿನಗಳಲ್ಲಿ ಅತ್ಯಾಧುನಿಕರೆನಿಸಿಕೊಳ್ಳುವ ಭಾರತೀಯರಲ್ಲೂ, 'ನಮ್ಮ ಸಂಸ್ಕೃತಿಯನ್ನು ನಾವು ಉಳಿಸಿಕೊಳ್ಳಬೇಕು' ಎಂಬ ಪ್ರಜ್ಞೆ ದೃಢವಾಗುತ್ತಿದೆ. ಇದು ನಮ್ಮ ಸಂಸ್ಕೃತಿಯ ಆಳದಲ್ಲಿ ಬೇರೂರಿದ 'ಭಾರತೀಯ'ವಾದ ಗುಣಸ್ವಭಾವದ ವಿಶೇಷತೆ. ಎಷ್ಟು ಏಟುಗಳನ್ನು ತಿಂದರೂ, 'ನಾನು ಬದುಕುತ್ತೇನೆ, ಏಕೆಂದರೆ ನಾನು ಅಮರ ಆತ್ಮ' ಎಂಬುದೇ ಈ ಶಕ್ತಿಯ ಹಿಂದಿನ ರಹಸ್ಯ.

## ನಮ್ಮ ಸಂಸ್ಕೃತಿಯ ತಾಯಿಬೇರು

ಆಧ್ಯಾತ್ಮಿಕತೆಯೇ ಭಾರತೀಯ ಸಂಸ್ಕೃತಿಯ ತಾಯಿಬೇರು. ಈ ಆಧ್ಯಾತ್ಮಿಕ ಆದರ್ಶ ಎಲ್ಲೋ ಕೆಲವು ಮಂದಿ ಒಂದೆಡೆ ಕುಳಿತು ರೂಪಿಸಿದ್ದಲ್ಲ. ಅಥವಾ ಕೆಲವು ವರ್ಷಗಳಲ್ಲಿ ರೂಪುಗೊಂಡದ್ದಲ್ಲ. ಸಹಸ್ರಾರು ವರ್ಷಗಳ ಹಿಂದೆ, ಇತಿಹಾಸವಿನ್ನೂ ತನ್ನ ನೆಲೆಯನ್ನು ಕಾಣಲಾಗದಷ್ಟು ಪ್ರಾಚೀನ ಕಾಲದಲ್ಲೇ ರೂಪುಗೊಂಡ ಆಧ್ಯಾತ್ಮಿಕ ಆದರ್ಶಗಳು ಈ ಸಂಸ್ಕೃತಿಯನ್ನು ರೂಪಿಸಿವೆ. ಇನ್ನೂ ನಾಗರಿಕತೆ, ಆಧುನಿಕತೆ ರೂಪುಗೊಳ್ಳುವ ಮೊದಲೇ ಒಬ್ಬ ಬಾಲಕನಿಗೆ ಗುರು ಬೋಧಿಸುತ್ತಾನೆ – '' ಈ ಪ್ರಪಂಚದ ಯಾವ ವಸ್ತುವಿನಿಂದಲೂ ಮಾನವನು ಪೂರ್ಣ ತೃಪ್ತಿಯನ್ನು ಹೊಂದಲಾರ. ನಿನ್ನ ಒಳಗಿರುವ ಸತ್ಯವನ್ನು ಅರಿತುಕೋ. ಆಗ ಮಾತ್ರ ನೀನು ಪೂರ್ಣನಾಗುವೆ.'' ಇಂಥ ಹತ್ತು ಹಲವು ಆಧ್ಯಾತ್ಮಿಕ ಆದರ್ಶಗಳೇ ನಮ್ಮ ಜನಾಂಗವನ್ನು ಮುನ್ನಡೆಸಿವೆ. ಬಾಹ್ಯ ಜಗತ್ತಿನ ಚಲನೆಗಳು, ಸಾವುನೋವುಗಳು, ದುಃಖಸಂಕಟಗಳು ನಮ್ಮ ಜನತೆಯನ್ನು ವಿಚಲಿತಗೊಳಿಸಲಿಲ್ಲ. ಅವರ ದೃಷ್ಟಿಯೆಲ್ಲವೂ ಶಾಶ್ವತದತ್ತ, ಅನಂತದತ್ತ. ಅಳಿವಿಲ್ಲದ, ಆದಿ-ಅಂತ್ಯವಿಲ್ಲದ ಹಾಗೂ ಯಾವುದೇ ಮಿತಿಗಳಿಲ್ಲದ ಬ್ರಹ್ಮ, ಆತ್ಮ ಅಥವಾ ಭಗವಂತ-ಇದೇ ಪರಮಸತ್ಯವೆಂಬ ನಂಬಿಕೆ ಇಡೀ ಭಾರತೀಯ ಸಂಸ್ಕೃತಿಯ ಆದರ್ಶವಾಗಿದೆ. ಅಂಥ ಪರಮ ಸತ್ಯವನ್ನು ಕಾಣುವುದು, ಅದರ ಸ್ಪರ್ಶಕ್ಕಾಗಿ ಬದುಕನ್ನೇ ಮೀಸಲಿಡುವುದು ಹಲವು ಮಂದಿ ಮಹಾತ್ಮರ ಉದಯಕ್ಕೆ ಕಾರಣವಾಯಿತು. ದಿವ್ಯತೆಯನ್ನು ಕಂಡ ದೈವೀವ್ಯಕ್ತಿಗಳ ಪ್ರಭಾವ ಸಮಾಜದ ಮೇಲೆ ಅತ್ಯಂತ ಗಾಢವಾಗಿ ಉಂಟಾಗುತ್ತದೆ; ಅದು ಶತಶತಮಾನಗಳವರೆಗೂ ಮುಂದುವರಿಯುವುದು. ಅಂಥ ಅನೇಕ ಮಂದಿ ದೈವೀವ್ಯಕ್ತಿಗಳ ನಾಡು ಇದು — ಅವರೇ ಈ ಸಂಸ್ಕೃತಿಯ ಕೇಂದ್ರಬಿಂದು. ರಾಮ, ಕೃಷ್ಣ, ಬುದ್ಧ, ಚೈತನ್ಯ, ಮೀರಾಬಾಯಿ, ಬಸವಣ್ಣ, ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರಂಥ ಮಹಾಪುರುಷರ ಜೀವನ ಹಾಗೂ ಪ್ರಭಾವದಿಂದ ಭಾರತೀಯ ಸಂಸ್ಕೃತಿ ನಿತ್ಯನೂತನವೂ, ದಿವ್ಯವೂ ಸಮೃದ್ಧವೂ ಆದ ಸ್ಫೂರ್ತಿಯ ಸೆಲೆಯೆನಿಸಿದೆ. ❁

### ಜನವರಿ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧ | ಶುಕ್ರವಾರ | ಕಲ್ಪತರು ದಿನಾಚರಣೆ |
| ೫ | ಮಂಗಳವಾರ | ಶ್ರೀಶಾರದಾದೇವಿ ಜಯಂತಿ |
| ೯ | ಶನಿವಾರ | ಏಕಾದಶಿ |
| | | ಸ್ವಾಮಿ ಶಿವಾನಂದ ಜಯಂತಿ |
| ೧೨ | ಮಂಗಳವಾರ | ರಾಷ್ಟ್ರೀಯ ಯುವ ದಿನಾಚರಣೆ |
| ೧೯ | ಮಂಗಳವಾರ | ಸ್ವಾಮಿ ಶಾರದಾನಂದ ಜಯಂತಿ |
| ೨೪ | ಭಾನುವಾರ | ಏಕಾದಶಿ |
| ೨೭ | ಬುಧವಾರ | ಸ್ವಾಮಿ ತುರೀಯಾನಂದ ಜಯಂತಿ |